
ಹಾರರ್, ಸೈನ್ಸ್ ಫಿಕ್ಷನ್, ಫ್ಯಾಂಟಸಿ, ಇತ್ಯಾದಿ ಪ್ರಕಾರಗಳಲ್ಲಿ 50ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಜನಪ್ರಿಯನಾದ ಅಮೆರಿಕನ್ ಲೇಖಕ ಸ್ಟೀಫನ್ ಕಿಂಗ್ 'ರಿಚರ್ಡ್ ಬಾಖ್‌ಮನ್' ಎಂಬ ಹೆಸರಿಟ್ಟುಕೊಂಡು ಏಳು ಸಾಮಾಜಿಕ ಕಾದಂಬರಿಗಳನ್ನೂ ರಚಿಸಿದ. ಆ ಕಾದಂಬರಿಗಳು ಪ್ರಸಿದ್ಧವಾದದ್ದೇ ಅವನಿಗೆ ಮತ್ತೆ ತನ್ನ ಹಳೆಯ ಪ್ರಕಾರಗಳಲ್ಲಿ ಬರೆಯಬೇಕೆನ್ನಿಸಿತು. ಆಗ ಅವನು ರಿಚರ್ಡ್ ಬಾಖ್‌ಮನ್ ಕಾವ್ಯನಾಮದ ಕಾದಂಬರಿಕಾರ ಕ್ಯಾನ್ಸರಿನಿಂದ ಸತ್ತುಹೋದನೆಂದು ಜಾಹೀರುಗೊಳಿಸುವ ಪತ್ರಿಕಾ ಪ್ರಕಟನೆಯೊಂದನ್ನು ನೀಡಿದ!

ಇದೊಂದು ಅಪರೂಪದ ಪ್ರಸಂಗ. ಯಾಕೆಂದರೆ ತಾವು ಇಟ್ಟುಕೊಂಡ ಹೆಸರನ್ನು ಎಂದಿಗೂ ಬಿಟ್ಟುಕೊಡದ ಲೇಖಕರೇ ಹೆಚ್ಚು. ಅವರಲ್ಲಿ ಕೆಲವರಿಗೆ ಒಂದಕ್ಕಿಂತ ಹೆಚ್ಚು ಹೆಸರುಗಳು. ನಮ್ಮ ಬೇಂದ್ರೆಯವರನ್ನೇ ತೆಗೆದುಕೊಳ್ಳಿ. 'ಅಂಬಿಕಾತನಯದತ್ತ', 'ಅಂದತ್ತ', 'ಬೇಂದ್ರೆ ದತ್ತ ರಾಮು', ಇವೆಲ್ಲವೂ ಹೆಸರುಗಳಷ್ಟೆ. ಕೀರ್ತಿನಾಥ ಕುರ್ತಕೋಟಿಯವರು ಬರೆದಿರುವಂತೆ ಬೇಂದ್ರೆಯವರ ವ್ಯಕ್ತಿತ್ವ ತೋರಿಕೆಗೆ ಕಾಣುವಷ್ಟು ಸರಳವಲ್ಲ. ಅವರೇ ಒಮ್ಮೊಮ್ಮೆ ಮಾತಾಡುತ್ತ ತಮ್ಮೊಳಗಿನ 'ಅಂಬಿಕಾತನಯದತ್ತ' ಹೇಳಿದ್ದನ್ನು ಬೇಂದ್ರೆ ಬರೆದುಕೊಳ್ಳುತ್ತಾರೆ ಎಂದು ಹೇಳುತ್ತಿರುತ್ತಾರೆ. ಇದು ಹೇಳುವ ಒಂದು ರೀತಿಯಾದರೂ ಕವಿ ಮತ್ತು ಅವನ ನಡುವಿನ ಸಂಬಂಧ ಮತ್ತು ಕವಿಯ ವ್ಯಕ್ತಿತ್ವಕ್ಕೂ ಅವನ ವ್ಯಾವಹಾರಿಕ ವ್ಯಕ್ತಿತ್ವಕ್ಕೂ ಇರುವ ಸಂಬಂಧದ ಬಗ್ಗೆ ಬೆಳಕು ಚೆಲ್ಲುತ್ತದೆ. ಶಬ್ದಗಳ ಮೂಲಕವಾಗಿ ಕವಿತೆ ತಳೆಯುವ ಆಕಾರವನ್ನು ಕಂಡು ಕವಿಗೇ ಅಪರಿಚಿತವಾದದ್ದನ್ನು ಕಾಣುವ ಅನುಭವವಾದರೆ ಆಶ್ಚರ್ಯಪಡಬೇಕಾಗಿಲ್ಲ.



ದಿ ಬುಕ್ ಆಫ್ ಡಿಸ್‌ಕ್ವೈಟ್

'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ' ಎಂದು ಪ್ರಾರಂಭವಾಗುವ ಬೇಂದ್ರೆಯವರ ಕವನ ಅವರಿಗೆ ಕನಸಿನಲ್ಲಿ ಕಾಣಿಸಿತಂತೆ. 'ಕಲ್ಪವೃಕ್ಷ ವೃಂದಾವನಂಗಳಲಿ'ಯಂಥ ಇನ್ನೂ ಕೆಲವು ಕವನಗಳನ್ನು ಅಥವಾ ಕವನಗಳ ಕೆಲವು ಸಾಲುಗಳನ್ನು, ಕನಸುಗಳೇ ಅವರಿಗೆ ಕರುಣಿಸಿರಲಿಕ್ಕೆ ಸಾಕು. ಪ್ರಜ್ಞಾಪೂರ್ವಕವಾಗಿ ಬರೆಯುವುದಕ್ಕೂ, ಬರೆಯಬೇಕಾದ್ದು 'ಇದ್ದಕಿದ್ದಂತಕಸ್ಮಾತ್' ಹೊಳೆದುಬಿಡುವುದಕ್ಕೂ ವ್ಯತ್ಯಾಸವುಂಟಲ್ಲವೆ? ಬೇಂದ್ರೆಯವರಲ್ಲಿ ತಮ್ಮ ವ್ಯಕ್ತಿತ್ವವನ್ನು, ಅದು ಬೇರೊಬ್ಬರದೇನೋ ಎನ್ನುವಂತೆ ಪರಿಭಾವಿಸುವ, ಬೇರೆ ವ್ಯಕ್ತಿತ್ವವನ್ನು ತಮ್ಮದೆಂದೇ ಅನುಭವಿಸುವ ಕವಿಸಹಜ ಗುಣ ಮೊದಲಿನಿಂದಲೂ ಇದ್ದದ್ದೇ. ಹಾಗೆ ನೋಡಿದರೆ, ಅದು ರಂಗಸ್ಥಳದಲ್ಲಿ ಅಭಿನಯಿಸುವವನ ಮುಖ್ಯ ಗುಣ. ಬೇಂದ್ರೆಯವರ ಕವಿತೆಗಳಲ್ಲಿ ಅವರ